ಬೇಕು. ಅದನ್ನು ತೆಗೆಯುವುದಕ್ಕಾಗುವುದಿಲ್ಲ. ಈಗ 2500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 22 ಟಿಎಂಸಿ ಸಿಲ್ಟನ್ನು ತೆಗೆಯುವುದಕ್ಕಾಗುವುದಿಲ್ಲ. ಡ್ಯಾಮನ್ನು ಇನ್‌ಕ್ರೀಸ್ ಮಾಡುವುದಕ್ಕಾಗುತ್ತದೆಯೇ ಎಂದು ತೋರಿಸಿದ್ದೇವೆ. ಅಮೇರಿಕನ್ ಇನ್ಸ್ ಟಿಟ್ಯೂಷನ್ ನಿಂದೆಲ್ಲಾ ಟೆಸ್ಟ್ ಮಾಡಿಸಿ ನೋಡಿದ್ದೇವೆ. ಅವರು ಆಗುವುದಿಲ್ಲ ಎಂದು ಹೇಳಿ ಸಬ್ ಮಿಟ್ ಮಾಡಿದ್ದಾರೆ. ವೈ.ಕೆ. ಮೂರ್ತಿ ಎಂದು ಹೇಳಿ ಡ್ಯಾಮ್ ಸೇಫ್ಟಿ ಕಮಿಟಿಯಲ್ಲಿ ಎಕ್ಸ್‌ಪರ್ಟ್ ಇದ್ದಾರೆ. ಆ ಎಕ್ಸ್‌ಪರ್ಟ್ಸ್‌ನ್ನು ಕಳುಹಿಸಿ ನಾವು ಟೆಸ್ಟ್ ಮಾಡಿಸುತ್ತಿದ್ದೇವೆ. ಏನಾದರೂ ಬೇರೆ ಮಾಡುವುದಕ್ಕಾಗತ್ತದೆಯೇ ಎಂದು ಕೇಳಿದ್ದಕ್ಕೆ ಅವರು ಆಗುವುದಿಲ್ಲ ಎಂದಿದ್ದಾರೆ. ಆದರೆ ತಾವು ಹೇಳಿದಂತೆ ಸಿಲ್ಟ್ ಮೇಲೆ ಬರುತ್ತಿದ್ದಂತೆ ನೀರು ತುಂಬುತ್ತಿದ್ದಂತೆ ರಿವರ್ಸ್ ಹೋಗಿ ಅದನ್ನು ಆಂಧ್ರದವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ನಾವು ಈಗ ರೈಟ್ಸ್ ಕಂಪನಿಯವರಿಗೆ ದೆಹಲಿಯಲ್ಲಿ ಆಥರೈಸ್ ಮಾಡಿ ಖಾಸಗಿಯವರಿಗೆ ಹೇಳಿ ಈ 21 ಟಿಎಂಸಿ ನೀರು ಏನು ಪಾಸ್ ಆಗುತ್ತದೆ, ಅದನ್ನು ಅರೆಸ್ಟ್ ಮಾಡಿ ಮತ್ತೆ ನಾವು ಇಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುವ ಬಗ್ಗೆ ಎಲ್ಲಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡಬೇಕು. ಯಾವ ಕಡೆ ಮಾಡಬೇಕು. ಸಮತೋಲನ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಟೆಕ್ನಿಕಲ್ ಫೀಸಿಬಿಲಿಟಿ ಬಗ್ಗೆ ದೆಹಲಿ ಕಮಿಟಿಗೆ ಒಂದೊವರೆ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಈಗಾಗಲೇ ಅದನ್ನು ಇನ್‌ವೆಸ್ಟ್ ಮಾಡಿದ್ದೇವೆ. ಇನ್ನು ಐದಾರು ತಿಂಗಳ ಒಳಗಡೆ ತಾವು ಮುಂದಿನ ಅಧಿವೇಶನಕ್ಕೆ ಬರುವುದರೊಳಗೆ ಆ ಎಲ್ಲಾ ಪೇಪರನ್ನು ಕಂಪ್ಲೀಟ್ ಮಾಡಿ ಆ place identify ಮಾಡಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡುತ್ತೇವೆ ಸ್ವಲ್ಪ ದಿವಸ ಕಷ್ಟ ಇವೆ. ಇಲ್ಲ ಎಂದು ಹೇಳುವುದಿಲ್ಲ. ಇನ್ನೊಂದು ವರ್ಷದವರೆಗೆ ಕಾಯಿರಿ. ನಾನು ಮಾನ್ಯ ಪ್ರಕಾಶ್‌ರವರು ಎರಡು ಮೂರು ಮೀಟಿಂಗ್ ಕುಳಿತು ಇವೆಲ್ಲಾ ಚರ್ಚೆ ಮಾಡಿದ್ದೇವೆ. Kindly wait for another 6-7 months. I will see that at least masterplan is prepared for the whole thing. Y. Kaggal, in the next meeting of the cabinet, it will be approved.

ಶಿವಮೊಗ್ಗ ಜಿಲ್ಲಾ ಎ.ಪಿ.ಎಂ.ಸಿ.ಗೆ ಚುನಾವಣೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲಾ ಎಪಿಎಂಸಿಯದ್ದು ಸುಮಾರು 20-22 ವರ್ಷದಿಂದ ಚುನಾವಣೆ ನಡೆದಿಲ್ಲ. ಬರೀ ಆಡಳಿತಾಧಿಕಾರಿಗಳನ್ನೇ ನೇಮಕ ಮಾಡಿಕೊಂಡು ಬಂದಿದ್ದೇವೆ. ಮತ್ತೆ ಏಪ್ರಿಲ್ 30 ರೊಳಗೆ ಚುನಾವಣೆ ಮಾಡುತ್ತೇವೆ ಎಂದು ಹೈಕೋರ್ಟಿಗೂ ಕೂಡ ಹೇಳಿಕೊಂಡು ಬಂದಿದ್ದೀರಿ. ಅದಕ್ಕೋಸ್ಕರ ತಕ್ಷಣ ಯಾವಾಗ ಚುನಾವಣೆ ಮಾಡುತ್ತೀರಿ ಎಂದು ಹೇಳಬೇಕು. ಏಕೆಂದರೆ ಹಿಂದೆ ಕಾಂಗ್ರೆಸ್ ಸರ್ಕಾರ ಇರಬೇಕಾದರೆ ಆಡಳಿತಾಧಿಕಾರಿಗಳನ್ನೇ ನೇಮಕ ಮಾಡಿಕೊಂಡು ಬಂದರು. ನಿಮ್ಮದು ಮೂರು ವರ್ಷ. ಅವರದ್ದು 19 ವರ್ಷ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸಹಕಾರಿ ಸಚಿವರು ಬಂದ ತಕ್ಷಣವೇ ತಿಳಿಸುತ್ತೇವೆ. ಈ ಸಮಯದಲ್ಲಿಯೇ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಏಕೆ ಮುಖ್ಯಮಂತ್ರಿಗಳಿಗೆ ಗಮನ ಸೆಳೆಯುತ್ತೇನೆ ಎಂದರೆ ತಾವು ನಮ್ಮ ಜಿಲ್ಲೆಯವರು. ಅವರು ಮಾಡಿದಂತೆ ನೀವು ಮಾಡಿದರೆ ಹೇಗೆ? ದಯವಿಟ್ಟು ಚುನಾವಣೆಯನ್ನು ನೀವು ಯಾವಾಗ ಮಾಡುತ್ತೀರಿ ಎಂದು ಹೇಳಿ.

ಉಪಾಧ್ಯಕ್ಷರು : ಅದಕ್ಕೆ ಸಂಬಂಧಪಟ್ಟ ಮಂತ್ರಿಯನ್ನು ಕರೆಯಿಸಿ ಮಾತನಾಡಿ ಹೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಚುನಾವಣೆ ನಡೆಸುವುದಕ್ಕೆ ಕೋರ್ಟಿಗೆ ಹೇಳಬೇಕಾದರೆ ಮುಖ್ಯಮಂತ್ರಿಯವರು ಹೇಳುವುದಕ್ಕೆ ತೊಂದರೆಯೇನು?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ನನಗೆ ಸಹಕಾರಿ ಸಂಘಗಳು, ಈ ಎ.ಪಿ.ಎಂ.ಸಿ ಈ ವಿಷಯಗಳನ್ನೇ ನಾನು ಎಂದೂ ಓದುವುದಕ್ಕೆ ಹೋಗಿಲ್ಲ. ನೋಡುವುದಕ್ಕೆ ಹೋಗಿಲ್ಲ. ಅವರು 22 ವರ್ಷವಾಯಿತು ಎಂದರಲ್ಲಾ, 22 ವರ್ಷ ಕಾದಮೇಲೆ ಇನ್ನೊಂದು ಎರಡು ವರ್ಷ ಕಾಯಿರಿ.

ಭದ್ರ ನಾಲೆ ಆಧುನೀಕರಣಗೊಳಿಸುವುದು.

ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ಉಪಾಧ್ಯಕ್ಷರೇ, ಭದ್ರಾ ಅಣೆಕಟ್ಟು ಕಟ್ಟಿ 30 ವರ್ಷವಾಯಿತು. ಅದಾದನಂತರ ನಾಲೆಗಳು ಒಡೆದುಹೋಗಿ ನೀರು ಟೈಲೆಂಡರ್ಸ್‌ಗೆ ಬರದಂತೆ ರೈತರಿಗೆ ಸಾಕಷ್ಟು ತೊಂದರೆಯಾಗಿದ್ದರೂ ಇವತ್ತು ಮಾನ್ಯ ನೀರಾವರಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ನನ್ನ ಕ್ಷೇತ್ರದ ಮಲೆಬೆನ್ನೂರಿನಲ್ಲಿ ಬಂದಾಗ ರೈತರ ಪರವಾಗಿ ಎಲ್ಲಾ ರೈತರು ಒಂದು ಬೇಡಿಕೆಯನ್ನು ಇಟ್ಟಿವು. ತತ್ ಕ್ಷಣ ಅದನ್ನು ಮಾಡ್ರನೈಜೇಶನ್ ಮಾಡಬೇಕು. ಅದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳು ಅಂದು ಭರವಸೆಯನ್ನು ಕೊಟ್ಟು ಎರಡು ವರ್ಷವಾಯಿತು. ರೈತರಿಗೆ ಬಹಳ ತೊಂದರೆಯಾಗಿದೆ. ಕೊನೆಯ ಹಂತದಲ್ಲಿರುವವರಿಗೆ ನೀರೇ ಬರುತ್ತಿಲ್ಲ. ಬ್ರೀಚಸ್ ಆಗಿದೆ. ದುರಸ್ತಿಯಾಗಿಯೇ ಇಲ್ಲ. ಅಂದರೆ ಈ ನೀರಾವರಿ ಮಂತ್ರಿಗಳ ಬಗ್ಗೆ ಬಹಳ ಭರವಸೆಯನ್ನು ನಾವು ಇಟ್ಟುಕೊಂಡಿದ್ದೆವು. ಎಲ್ಲಾ ದುರಸ್ಥಿ ಮಾಡುತ್ತಾರೆ ಎಂದು. ಅವರು ಏಕೋ ನಮ್ಮ ಭಾಗಕ್ಕೆ ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ. ಅದೇನು ಎಂದು ಅರ್ಥವಾಗುತ್ತಿಲ್ಲ. ಆದ್ದರಿಂದ ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳಾಗಿದ್ದಾರೆ. ಅವರು ನಾಗೇಗೌಡರು ಬಹಳ ಆತ್ಮೀಯ ಸ್ನೇಹಿತರಾಗಿದ್ದು ನಾವು ಹೇಳಿದ್ದು ಮಾಡುತ್ತಾರೆ ಎಂದು ನಂಬಿದ್ದೆವು. ಭರವಸೆ ಕೊಟ್ಟಿದ್ದನ್ನು ಉಳಿಸಿಕೊಳ್ಳುತ್ತಾರೋ, ರೈತರಿಗೆ ಅನುಕೂಲ ಮಾಡುತ್ತಾರೋ ಎನ್ನುವುದನ್ನು ಅದನ್ನು ತಮ್ಮೂಲಕ ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ತಕ್ಷಣ ಮಾಡ್ರನೈಜೇಷನ್ ಆಫ್ ದಿ ಕ್ಯಾನಲ್‌ನ್ನು ತೆಗೆದುಕೊಳ್ಳಬೇಕೆಂದು ತಮ್ಮೂಲಕ ಕೇಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ನಮ್ಮ ಮುಖ್ಯಮಂತ್ರಿಗಳು ಮಲೆಬೆನ್ನೂರಿನಲ್ಲಿ ಯಾವ ಯಾವ ಭರವಸೆಯನ್ನು ಕೊಟ್ಟಿದ್ದರೋ ಆ ಎಲ್ಲಾ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಕೊಂಡಜ್ಜಿ ಕೆರೆಯಿಂದ ಇಲ್ಲಿಯವರೆಗೆ ಎಲ್ಲಾ ಕೆಲಸವನ್ನು ಮುಗಿಸಿದ್ದೇವೆ. ಒಂದೇ